**ಪ್ರಥಮ ಆಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ.**

**ಸಿ.ಸಿ.ನಂ.519/2021**

ಪಿರ್ಯಾದುದಾರರು : ನೇಸರಗಿ ಪೊಲೀಸ ಠಾಣೆ

**ವಿರುದ್ದ**

ಆರೋಪಿ ಹೆಸರುಃ 1. ಪ್ರದೀಪ ರಮೇಶ ತೋಟಗಿ
2. ರಮೇಶ ಶಿವಲಿಂಗಪ್ಪ ತೋಟಗಿ
3. ಗಂಗವ್ವ ರಮೇಶ ತೋಟಗಿ

**ದಂಡ ಪ್ರಕ್ರೀಯಾ ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿ ಹೇಳಿಕೆ**

ಪ್ರಶ್ನೆ 1. ಪ್ರಾಸಾ-1 ನಿರ್ಮಲ ರಮೇಶ ಬಾಗಿ ಇವರು ತಮ್ಮ ಸಾಕ್ಷ್ಯದಲ್ಲಿ ತನ್ನ ತವರು ಮನೆ ಬೈಲಹೊಂಗಲ ತಾಲೂಕಿನ ನಾಗನೂರ ಗ್ರಾಮವಾಗಿರುತ್ತದೆ. ನಾಗನೂರ ಗ್ರಾಮದಲ್ಲಿ ಚಾಸಾ-4 ರಿಂದ 7 ರವರು ವಾಸವಾಗಿರುತ್ತಾರೆ. ಆರೋಪಿತರು ತನ್ನ ಸಂಬಂಧಿಕರು. ತಾವು ನಮ್ಮ ಅಣ್ಣನಾದ ಸಿದ್ರಾಮ ಬಸಲಿಂಗಪ್ಪ ತೋಟಗಿ ಈತನು ತಮ್ಮ ಆಸ್ತಿ ಪಡೆಯುವ ಕುರಿತು ತಕರಾರು ಹಾಕಿರುತ್ತೇವೆ. ದಿ.11-01-2021 ರಂದು ತಾನು ತವರು ಮನೆಗೆ ತಾಯಿ ಸೀರೆ ಕಾರ್ಯಕ್ರಮಕ್ಕೆ ಬಂದಿರುತ್ತೇನೆ, ಅದೇ ದಿನ ರಾತ್ರಿ 8.30 ರ ಸುಮಾರಿಗೆ ತಾನು, ಚಾಸಾ-4 ರಿಂದ 7 ಮನೆಯ ಮುಂದೆ ಕುಳಿತಿದ್ದೇವು. ಅದೇ ವೇಳೆಗೆ ಎರಡನೇ ಆರೋಪಿಯು ಅಲ್ಲಿಗೆ ಬಂದು ಸಿದ್ರಾಮನಿಗೆ ಏಕೆ ತಕರಾರು ಸಲ್ಲಿಸಿರುತ್ತೀರಿ ಎಂದು ಕೇಳಿರುತ್ತಾರೆ. ಅದೇ ವೇಳೆಗೆ ತಾವು ಮಾತನಾಡುತ್ತಿದ್ದಾಗ ಒಂದನೇ ಆರೋಪಿಯು ತಮ್ಮ ತಂದೆಯನ್ನು ಏನೂ ಕೇಳುತ್ತೀರಿ ಎಂದು ಚಾಸಾ-4 ರವರಿಗೆ ಕೊಡಲಿಕಾವು ತೆಗೆದುಕೊಂಡು ಹಲ್ಲೆ ಮಾಡಿರುತ್ತಾನೆ. ಅದೇ ವೇಳೆಗೆ ಚಾಸಾ-5 ರವರು ಬಿಡಿಸಲು ಹೋದಾಗ ಒಂದನೇ ಆರೋಪಿಯು ಬಡಿಗೆಯಿಂದ ಹಲ್ಲೆ ಮಾಡಿ ಗಾಯಪಡಿಸಿರುತ್ತಾನೆ. ನಂತರ ಆರೋಪಿತರು ಎಲ್ಲರೂ ಸೇರಿ ತನಗೆ ಮತ್ತು ಚಾಸಾ-6 ಮತ್ತು 7 ರವರಿಗೆ ಹೊಡೆಬಡೆ ಮಾಡಿ ಒಳಪೆಟ್ಟು ಮಾಡಿರುತ್ತಾರೆ. ನಂತರ ಚಾಸಾ-2 ಮತ್ತು ಇತರರು ಜಗಳ ಬಿಡಿಸಿರುತ್ತಾರೆ. ನಂತರ ಚಾಸಾ-4 ರವರಿಗೆ ತಮ್ಮ ಊರಿನಲ್ಲಿರುವ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಹೆಚ್ಚಿನ ಚಿಕಿತ್ಸೆಗಾಗಿ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಸೇರಿಕೆ ಮಾಡಿರುತ್ತೇವೆ. ನಂತರ ತಾನು ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ವಿಚಾರಣೆ ಮಾಡಿ ದೂರನ್ನು ಪಡೆದುಕೊಂಡಿರುತ್ತಾರೆ. ತಾನು ಪೋಲಿಸರಿಗೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 2. ಪ್ರಾಸಾ-3 ನಿಂಗಪ್ಪ ಬಸಲಿಂಗಪ್ಪ ಕೇಸಪ್ಪನಟ್ಟಿ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ರವರ ಪರಿಚಯ ಇರುತ್ತದೆ. ದಿಃ13.1.2021 ರಂದು ಪೊಲೀಸರು ನಾಗನೂರು ಗ್ರಾಮಕ್ಕೆ ಬಂದಿದ್ದರು. ಅಲ್ಲಿ ಚಾಸಾ-7 ರವರು ಹಾಜರಿದ್ದರು. ಪೊಲೀಸರು ಬೆಳಿಗ್ಗೆ 10.30 ರಿಂದ ಅರ್ಧ ಗಂಟೆಯವರೆಗೆ ಪಂಚನಾಮೆಯನ್ನು ಮಾಡಿ ತನ್ನ ಸಹಿ ಪಡೆದಿರುತ್ತಾರೆ. ನಂತರ ಪೊಲೀಸರು ಕೊಡಲಿ ಕಾವು ಮತ್ತು ಕಟ್ಟಿಗೆಯನ್ನು ತೆಗೆದುಕೊಂಡು ಒಂದು ಪೋಟೋ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 3. ಪ್ರಾಸಾ-4 ಶಾಂತವ್ವ ಬಸಪ್ಪ ತೋಟಗಿ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-4 ತನ್ನ ಗಂಡ. ಸದರಿಯವರು ಈಗ ಮೃತ ಪಟ್ಟಿರುತ್ತಾರೆ. ಚಾಸಾ-1, 6 ಮತ್ತು 7 ತನ್ನ ಮಕ್ಕಳು. ಆರೋಪಿತರು ತನ್ನ ಸಂಬಂದಿಕರು. ತಮ್ಮ ಮತ್ತು ತನ್ನ ಮಗ ಸಿದ್ರಾಮ ನಡುವೆ ಆಸ್ತಿ ಕುರಿತು ಮನಸ್ತಾಪ ಇತ್ತು ಆ ಕಾರಣಕ್ಕಾಗಿ ತಾವು ತಹಶೀಲ್ದಾರ ಕಚೇರಿಯಲ್ಲಿ ತಕರಾರು ಅರ್ಜಿ ಸಲ್ಲಿಸಿರುತ್ತೇವೆ. ದಿಃ11.01.2021 ರಂದು ತಾವು ಮನೆಯ ಮುಂದೆ ಇದ್ದಾಗ 2 ನೇ ಆರೋಪಿಯು ಅಲ್ಲಿಗೆ ಬಂದು ತಕರಾರು ಅರ್ಜಿಯನ್ನು ಹಿಂತೆಗೆದುಕೊಳ್ಳುವಂತೆ ಹೇಳಿರುತ್ತಾರೆ. ಅದೇ ವೇಳೆಗೆ 3 ಮತ್ತು 1 ನೇ ಆರೋಪಿಯು ಅಲ್ಲಿಗೆ ಬಂದು ಜಗಳ ತೆಗೆದಿರುತ್ತಾರೆ. 3 ನೇ ಆರೋಪಿಯು ಬೊಸುಡಿರಾ ನಮಗೇನು ಹೇಳುತ್ತೀರಾ ಎಂದು ಚಾಸಾ-6 ರವರಿಗೆ ಕೈಯಿಂದ ಕಪಾಳಕ್ಕೆ ಹೊಡೆದು ಜಗಳ ತೆಗೆದಿರುತ್ತಾರೆ. ಅದೇ ವೇಳೆಗೆ ಚಾಸಾ-4 ರವರು ಜಗಳ ಬಿಡಿಸಲು ಬಂದಾಗ 1 ನೇ ಆರೋಪಿಯು ಕೊಡಲಿ ಕಾವಿನಿಂದ ಅವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ. ಅದರಿಂದ ಚಾಸಾ-4 ರವರಿಗೆ ತಲೆಗೆ ರಕ್ತ ಗಾಯವಾಗಿ ಪ್ರಜ್ಞಾಹೀನರಾಗಿ ಬಿದ್ದಿರುತ್ತಾರೆ. ನಂತರ ತನಗೆ 1 ನೇ ಆರೋಪಿಯು ತನ್ನ ಬಲಗೈಗೆ ಹೊಡೆದು ಗಾಯಪಡಿಸಿರುತ್ತಾನೆ. ಜಗಳವನ್ನು ನೋಡಿ ಚಾಸಾ-8 ಮತ್ತು 9 ರವರು ಬಿಡಿಸಿರುತ್ತಾರೆ. ನಂತರ ತಾವು ಆಸ್ಪತ್ರೆಗೆ ದಾಖಲಾಗಿರುತ್ತೇವೆ. ನಂತರ ಚಾಸಾ-1 ರವರು ದೂರನ್ನು ನೀಡಿದ್ದು ಪೊಲೀಸರು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಬಂದು ತನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 4. ಪ್ರಾಸಾ-5 ಮಹದೇವಿ ಸಂಗಪ್ಪ ದರಗುಂಟಿ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-4 ಮತ್ತು 5 ತನ್ನ ತಂದೆ - ತಾಯಿ. ಚಾಸಾ-1 ತನ್ನ ಅಕ್ಕ. ಆರೋಪಿತರು ತನ್ನ ಸಂಬಂದಿಕರು. ತಮ್ಮ ಮತ್ತು ತಮ್ಮ ಅಣ್ಣ ಸಿದ್ದರಾಮ ತೋಟಗಿ ಈತನ ನಡುವೆ ಜಮೀನಿನ ಕುರಿತು ಮನಸ್ತಾಪ ಇತ್ತು. ದಿಃ11.01.2021 ರಂದು ತಾನು ಮತ್ತು ಚಾಸಾ-1 ಮತ್ತು 7 ಎಲ್ಲರೂ ಸೇರಿ ನಾಗನೂರಿನಲ್ಲಿರುವ ತನ್ನ ತಾಯಿ ಮನೆಗೆ ಸೀರೆ ಕಾರ್ಯಕ್ರಮಕ್ಕೆ ಬಂದಿದ್ದೆವು. ಅದೇ ದಿನ ರಾತ್ರಿ 8.30 ರ ಸುಮಾರಿಗೆ ತಾನು, ಚಾಸಾ-1, 4, 5 ಮತ್ತು 7 ಎಲ್ಲರೂ ಮನೆಯ ಮುಂದೆ ಕುಳಿತಿದ್ದೆವು. ಆ ವೇಳೆಗೆ 2 ನೇ ಆರೋಪಿಯು ಅಲ್ಲಿಗೆ ಬಂದು ಜಮೀನಿಗೆ ತಕರಾರು ಅರ್ಜಿಯನ್ನು ಹಿಂಪಡೆಯುವಂತೆ ಹೇಳಿರುತ್ತಾನೆ. ಅದೇ ವೇಳೆಗೆ ಆರೋಪಿ 1 ಮತ್ತು 3 ರವರು ಅಲ್ಲಿಗೆ ಬಂದಿರುತ್ತಾರೆ. ಆ ವೇಳೆಗೆ 1 ನೇ ಆರೋಪಿಯು ಕೊಡಲಿ ಕಾವಿನಿಂದ ಚಾಸಾ-4 ರವರ ತಲೆಗೆ ಹೊಡೆದು ಗಾಯಪಡಿಸಿರುತ್ತಾನೆ. 3ನೇ ಆರೋಪಿಯು ತನ್ನ ಬಲಗೈ ಹಿಡಿದು ಕಪಾಳಕ್ಕೆ ಬಡಿದಿರುತ್ತಾರೆ. 1 ನೇ ಆರೋಪಿಯು ಅದೇ ವೇಳೆಗೆ ಚಾಸಾ-5 ರವರಿಗೂ ಸಹಾ ಅಲ್ಲೇ ಇದ್ದ ಕಟ್ಟಿಗೆಯಿಂದ ಜೋರಾಗಿ ಬಲಗೈಗೆ ಹೊಡೆದು ಗಾಯಪಡಿಸಿರುತ್ತಾನೆ. ನಂತರ ಜಗಳವನ್ನು ಚಾಸಾ-8 ಮತ್ತು 9 ರವರು ನೋಡಿ ಬಿಡಿಸಿರುತ್ತಾರೆ. ನಂತರ ತಾವು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿರುತ್ತೇವೆ. ನಂತರ ಪೊಲೀಸರು ಆಸ್ಪತ್ರೆಗೆ ಬೆಟ್ಟಿ ನೀಡಿದಾಗ ಈ ಮೇಲಿನಂತೆ ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರು ತನಗೆ ಮತ್ತು ಚಾಸಾ-1, 4, 5 ಮತ್ತು 7 ರವರಿಗೆ ಜೀವ ಬೇದರಿಕೆ ಹಾಕಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 5. ಪ್ರಾಸಾ-6 ಕಸ್ತೂರಿ ರಮೇಶ ದಾನಪ್ಪಗೋಳ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ತನ್ನ ಅಕ್ಕ, ಚಾಸಾ-4 ತನ್ನ ತಂದೆ. ಚಾಸಾ-5 ತನ್ನ ತಾಯಿ. ಚಾಸಾ-6 ತನ್ನ ಸಹೋದರಿ. ಚಾಸಾ-8 ಮತ್ತು 9 ತನ್ನ ಪರಿಚಯದವರು. ಆರೋಪಿಗಳು ತನ್ನ ಸಂಬಂದಿಕರು. ದಿ.11.01.2021 ರಲ್ಲಿ ತಾವು ತಮ್ಮ ತಾಯಿಗೆ ಸೀರೆ ಮಾಡಲು ಬಂದಿದ್ದವು, ಎಲ್ಲಾ ಕಾರ್ಯ ಕ್ರಮ ಮುಗಿಸಿ ಸಾಯಂಕಾಲ ಕಟ್ಟೆ ಮೇಲೆ ಕುಳಿತು ಮಾತನಾಡುತ್ತಾ ಇದ್ದಾಗ ಆರೋಪಿ 2 ರವರು ಬಂದು ತಹಶೀಲ್ದಾರ ಕಚೇರಿಯಲ್ಲಿ

ತಕರಾರು ಸಲ್ಲಿಸಿದ್ದೀರಾ ಎಂದು ಅದನ್ನು ಹಿಂತೆಗೆದುಕೊಳ್ಳಿ ಎಂದು ಆಗ ಆರೋಪಿ 1 ಮತ್ತು 3 ರವರು ಬಂದು ಅವರು ತಮ್ಮ ಗಂಡನ ಜೊತೆ ಯಾಕೆ ಮಾತು ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಆರೋಪಿ 1 ರವರು ಕೊಡಲಿ ಕಾವಿನಿಂದ ಚಾಸಾ-4 ಮತ್ತು 5 ರವರಿಗೆ ಹೊಡೆದರು. ಚಾಸಾ-5 ರವರಿಗೆ ಬಲಗೈಗೆ, ಚಾಸಾ-4 ರವರಿಗೆ ತಲೆಗೆ ಹೊಳಿಗೆ ಬಿದ್ದಿರುತ್ತದೆ. ತನಗೂ ಹಾಗೂ ಚಾಸಾ-6 ರವರಿಗೆ ಒಳಪೆಟ್ಟು ಆಗಿರುತ್ತದೆ. ಚಾಸಾ-8 ರವರು ಬಂದು ಜಗಳ ಬಿಡಿಸಿರುತ್ತಾರೆ. ಚಾಸಾ-4 ಮತ್ತು 5 ರವರನ್ನು ಗಾಡಿ ಮಾಡಿಕೊಂಡು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಆರೋಪಿತರ ವಿರುದ್ಧ ದೂರನ್ನು ಸಲ್ಲಿಸಿರುತ್ತೇವೆ. ಆಸ್ಪತ್ರೆಗೆ ಚಾಸಾ-4 ಮತ್ತು 5 ಮತ್ತು 6 ರವರು ಹೋಗಿರುತ್ತಾರೆ. ಪೋಲಿಸರು ಚಾಸಾ-2 ಮತ್ತು 3 ರವರ ಸಮಕ್ಷಮ 10.00 ರಿಂದ 10.30 ಸಮಯದಲ್ಲಿ ಪಂಚನಾಮೆ ಮಾಡಿರುತ್ತಾರೆ, ಪೋಟೋ ತೆಗೆದಿರುತ್ತಾರೆ, ಅದೇ ಸಮಯದಲ್ಲಿ ಕೊಡಲಿ ಕಾವು ಹಾಗೂ ಕಟ್ಟಿಗೆ ಬಡಿಗೆಯನ್ನು ಜಪ್ತಿ ಮಾಡಿರುತ್ತಾರೆ. ಪೋಲಿಸರಿಗೆ ತಾನು ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 6. ಪ್ರಾಸಾ-9 ಡಾಃ ನಿಂಗಪ್ಪ ಈರಪ್ಪ ಸಂಸುದ್ದಿ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಬೈಲಹೊಂಗಲ ಸರ್ಕಾರಿ ಆಸ್ಪತ್ರೆಯಲ್ಲಿ 2018 ರಿಂದ ಇಲ್ಲಿಯವರೆಗೆ ಕಣ್ಣಿನ ತಜ್ಞ ವೈದ್ಯರಾಗಿ ಕರ್ತವ್ಯ ನಿರ್ವಹಿಸುತ್ತಾ ಇರುತ್ತೇನೆ. ದಿ.11.01.2021 ರಂದು ಬೆಳಿಗ್ಗೆ 10.30ಕ್ಕೆ ಚಾಸಾ-4 ರವರು, ವಯಸ್ಸು 68 ನಾಗನೂರು ಹಲ್ಲೆಗೆ ಸಂಬಂದ ಗಾಯಕ್ಕೆ ಸಂಬಂದಿಸಿದಂತೆ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರಿಶೀಲಿಸಿದಾಗ ಎಡಗಡೆ ತಲೆ ಹಿಂಭಾಗದಲ್ಲಿ 4.00ಸೆಂ.ಮೀ ಹಾಗಾ ಅರ್ಧ ಸೆಂ.ಮೀ ಗಾತ್ರದ ಹರಿದಂತಹ ಗಾಯಗಳು ಆಗಿತ್ತು. ಎಡಗಡೆ ಕಣ್ಣಿನ ಭಾಗದಲ್ಲಿ 3.00ಸೆಂ.ಮೀ ಉದ್ದ X 1.5 ಸೆಂ.ಮೀ ಅಗಲದ ಹರಿದಂತಹ ಗಾಯಗಳು ಆಗಿದ್ದವು. ಸದರಿ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿದ್ದವು. ದಿ.11.01.2021 ರಂದು ಬೆಳಿಗ್ಗೆ 10.45 ರ ಸುಮಾರಿಗೆ ಚಾಸಾ-7 ರವರು, ವಯಸ್ಸು 28, ಊರು ಹುದಲಿ ಹಲ್ಲೆಗೆ ಸಂಬಂದ ಗಾಯಕ್ಕೆ ಸಂಬಂದಿಸಿದಂತೆ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರಿಶೀಲಿಸಿದಾಗ ಬೆನ್ನಿನ ಕೆಳಭಾಗದಲ್ಲಿ ನೋವು ಇತ್ತು. ಸದರಿ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು. ದಿ.11.01.2021 ರಂದು ಬೆಳಿಗ್ಗೆ 11.30 ರ ಸುಮಾರಿಗೆ ಚಾಸಾ-5 ರವರು, ವಯಸ್ಸು 55, ಊರು ನಾಗನೂರು ಹಲ್ಲೆಗೆ ಸಂಬಂದ ಗಾಯಕ್ಕೆ ಸಂಬಂದಿಸಿದಂತೆ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರಿಶೀಲಿಸಿದಾಗ ತಲೆ ಹಿಂಭಾಗದಲ್ಲಿ 2 ಸೆಂ.ಮೀ ಉದ್ದ X 2 ಸಂ.ಮೀ ಅಗಲ ಊದಿಕೊಂಡಿತ್ತು. ಎಡಗಡೆ ಕೈನ ಹಿಂಭಾಗದ ಎಲುಬು ಮುರಿದಿತ್ತು. 1 ನೇ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿತ್ತು. 2 ನೇ ಗಾಯ ತೀವ್ರ ಸ್ವರೂಪದ ಆಗಿರುತ್ತದೆ. ದಿ.12.01.2021 ರಂದು 12.01 ನಿಮಿಷ ಸುಮಾರಿಗೆ ಚಾಸಾ-6 ರವರು, ವಯಸ್ಸು 30, ಊರು ನಾಗನೂರು ಹಲ್ಲೆಗೆ ಸಂಬಂದ ಗಾಯಕ್ಕೆ ಸಂಬಂದಿಸಿದಂತೆ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರಿಶೀಲಿಸಿದಾಗ ಎಡಗಡೆ ಕೈ ಮುಂಭಾಗದಲ್ಲಿ ನೋವು ಇತ್ತು. ಎಡಗಡೆ ಮೊಣಕೈಯಲ್ಲಿ ನೋವು ಇತ್ತು ಈ ಎರಡು ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಆಗಿತ್ತು. ದಿ.11.01.2021 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಚಾಸಾ-1 ರವರು, ವಯಸ್ಸು 40, ಊರು ಚಿಕ್ಕೋಡಿ ಹಲ್ಲೆಗೆ ಸಂಬಂದ ಗಾಯಕ್ಕೆ ಸಂಬಂದಿಸಿದಂತೆ ಚಿಕಿತ್ಸೆಗೆ ಬಂದಿದ್ದರು. ಅವರನ್ನು ಪರಿಶೀಲಿಸಿದಾಗ ಎಡಗಡೆ ತಲೆ ಮುಂಭಾಗದಲ್ಲಿ 4 ಸೆಂ.ಮೀ ಉದ್ದ ಅರ್ಧ ಸೆಂ.ಮೀ ಅಗಲ ಇರುವ ಹರಿದಾದ ಗಾಯ ಇದ್ದವು. ಸದರಿ ಗಾಯ ಸಾಧಾರಣ ಸ್ವರೂಪದ ಗಾಯ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ 7. ಪ್ರಾಸಾ-10 ವಾಯ ಎಲ ಶೀಗಿಹಳ್ಳಿ ಇವರು ತಮ್ಮ ಸಾಕ್ಷ್ಯದಲ್ಲಿ ತಾನು 2019 ಅಕ್ಟೊಬರ ರಿಂದ 2024 ಡಿಸೆಂಬರ್ 31 ರವರೆಗೆ ನೇಸರಗಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕಾರ್ಯ ನಿರ್ವಹಿಸಿರುತ್ತೇನೆ. ದಿ.12.01.2021 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಹಲ್ಲೆಗೆ ಸಂಬಂದಿಸಿದಂತೆ ಲಿಖಿತ ದೂರನ್ನು ಚಾಸಾ-6 ರವರ ಮೂಲಕ ಬರೆಯಿಸಿ ನೀಡಿರುತ್ತಾರೆ. ಗುನ್ನೆ ನಂ.2/2021 ರಂತೆ ದಾಖಲಿಸಿ ಪ್ರ.ವ.ವ ಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿ:13.01.2021 ರಂದು ಚಾಸಾ-7 ರವರು ಘಟನಾ ಸ್ಥಳ ತೋರಿಸಿದಂತೆ ಚಾಸಾ-2 ಮತ್ತು 3 ರವರ ಸಮಕ್ಷಮ ಮುಂಜಾನೆ 9 ರಿಂದ 10 ಗಂಟೆ ಅವದಿಯಲ್ಲಿ ಸ್ಥಳ ಪಂಚನಾಮೆಯನ್ನು ಜರುಗಿಸಲಾಯಿತು. ಕೊಡಲಿ ಕಾವು ಹಾಗೂ ಒಂದು ಕಟ್ಟಿಗೆ ಬಡಿಗೆಯನ್ನು ವಶಪಡಿಸಿಕೊಳ್ಳಲಾಯಿತು. ಅದೇ ಸಮಯದಲ್ಲಿ ಒಂದು ಕಚ್ಚಾ ನಕಾಶೆಯನ್ನು ತಯಾರಿಸಲಾಯಿತು. ಅದೇ ದಿನ ಫಿರ್ಯಾದಿಯ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-4 ರಿಂದ 9 ರವರ ಹೇಳಿಕೆ ಪಡೆದು ಕಡತಕ್ಕೆ ಅಳವಡಿಸಿಕೊಡಿರುತ್ತೇನೆ. ಅದೇ ದಿನ ಕೊಡಲಿ ಕಾವು ಹಾಗೂ ಬಡಿಗೆಯನ್ನು ನ್ಯಾಯಾಲಯಕ್ಕೆ ಪಿ ಎಪ ಸಲ್ಲಿಸಿ ನೀಡುತ್ತೇನೆ. ಅದೇ ದಿನ 15.00 ಗಂಟೆಗೆ ಆರೋಪಿತರನ್ನು ದಸ್ತಗೀರಿ ಮಾಡಿ ಠಾಣೆಗೆ ಕರೆದುಕೊಂಡು ಯೋಗ್ಯ ಬೆಂಗಾವಿನಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ತಾನು ಚಾಸಾ-1, 4, 5, 6, 7 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ:19-02-2020 ಕ್ಕೆ ಪ್ರಕರಣ ಪೂರ್ಣ ಗೊಂಡಿದ್ದರಿಂದ ಆರೋಪಿತರ ವಿರುದ್ದ ಸಾಕ್ಷದಾರಗಳು ಇದ್ದ ಕಾರಣ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುತ್ತಿರಿ?

ಉತ್ತರಃ

ಪ್ರಶ್ನೆ.8. ಈ ಪ್ರಕರಣದಲ್ಲಿ ನೀವು ಸ್ವ ಇಚ್ಛೆಯಿಂದ ಏನಾದರೂ ಹೇಳುವುದಿದೇಯಾ?

ಉತ್ತರಃ

ಪ್ರಶ್ನೆ.9. ನಿಮ್ಮ ಪರವಾಗಿ ಏನಾದರೂ ಸಾಕ್ಷಿ ಇದೆಯಾ?

ಉತ್ತರಃ

(ಈ ಮೇಲ್ಕಂಡ ಅಪರಾಧವನ್ನು ಸೂಚಿಸುವ ಸಂಗತಿಗಳನ್ನು ಆರೋಪಿತರಿಗೆ ಅರ್ಥವಾಗುವ ಬಾಷೆಯಲ್ಲಿ ಬಹಿರಂಗ ನ್ಯಾಯಾಲಯದಲ್ಲಿ ಓದಿ, ವಿವರಿಸಿ ಅವರು ನೀಡಿದ ಉತ್ತರವನ್ನು ಯಥಾವತ್ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ಪ್ರಮಾಣಿಕರಿಸುತ್ತೆನೆ.)

ಸಹಿ/-

ದಿಃ 09.04.2026 **ಪ್ರ.ಆ.ದಿ.ನ್ಯಾ.ಪ್ರ.ದ.ನ್ಯಾ.ದಂಡಾಧಿಕಾರಿಗಳು. ಬೈಲಹೊಂಗಲ.**